**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 298/2023** **CW**-5 **PW**-1

**ಸಾಕ್ಷಿಯನ್ನು ದಿಃ 09.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ವನಜಾಕ್ಷಿ |
| ಗಂಡನ ಹೆಸರುಃ | ಸ್ವಾಮಿಗೌಡ |
| ವಯಸ್ಸುಃ | 55 ವರ್ಷ |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಪಡುವನಹಳ್ಳಿ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ನನ್ನ ಅತ್ತಿಗೆ.

ಸಾಕ್ಷಿಗೆ ಸ್ಥಳ ಮಹಜರ್ ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

4 ವರ್ಷಗಳ ಹಿಂದೆ ಚಾಸಾ-1 ಮತ್ತು ಆರೋಪಿತರ ನಡುವೆ ಗಲಾಟೆ ಆಗಿದ್ದು, ಈ ಸಂಬಂಧ ಪೋಲೀಸರು ಬೆಳಗ್ಗೆ 10.00 ಗಂಟೆಗೆ ಸ್ಥಳಕ್ಕೆ ಬಂದಿದ್ದು, ಚಾಸಾ-1 ರವರು ಸ್ಥಳವನ್ನು ತೋರಿಸಿದ್ದು, ಪೋಲೀಸರು ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ. ಅದರಲ್ಲಿರುವ ಎಲ್ಲಾ ಅಂಶಗಳು ಗೊತ್ತಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವೈ ಜಿ ಎಮ್ ರವರಿಂದ ಃ**

ಮಹಜರ್ ನ ದಿನಾಂಕ ನಿರ್ದಿಷ್ಟವಾಗಿ ಗೊತ್ತಿಲ್ಲ. ಮಹಜರ್ ಗೆ ಬರುವಂತೆ ಲಿಖಿತ ನೋಟೀಸ್ ನೀಡಿಲ್ಲ. ಮಹಜರ್ ಸಮಯದಲ್ಲಿ ಸುಮಾರು 7-8 ಜನ ಇದ್ದರು. ಮಹಜರ್ ನಲ್ಲಿ ಏನು ಬರೆದಿದೆ ಎಂದು ಪೋಲೀಸರು ಓದಿ ಹೇಳಿರುತ್ತಾರೆ. ಮಹಜರ್ ನ್ನು ಬೆಳಗ್ಗೆ 10.00 ರಿಂದ ½ ಗಂಟೆ ಕಾಲ ಬರೆದಿರುತ್ತಾರೆ. ಚಾಸಾ-1 ರವರು ಸಂಬಂಧಿಕರಾಗಿರುವುದರಿಂದ

ಅವರಿಗೆ ಸಹಾಯ ಮಾಡಲು ನಿಪಿ–1 ಕ್ಕೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದರೂ ಸ್ಥಳದಲ್ಲಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**